ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ
ಗಣಕ ಸಂಖ್ಯೆ: 3332088
ದಿನಾಂಕ: 01-12-2021

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಗದಗ – ವಾಡಿ ರೈಲ್ವೆ ಮಾರ್ಗದ ಯೋಜನೆಯ ಭೂಸ್ವಾಧೀನಕ್ಕೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 111 ರಾರಾಹೆ 2012 ದಿನಾಂಕ : 18.02.2014
2. ಸರ್ಕಾರಿ ಆದೇಶ ಸಂಖ್ಯೆ: ಮೂಅಇ 111 ರಾರಾಹೆ 2012 ದಿನಾಂಕ : 29.09.2015, 26.02.2016 ಮತ್ತು 29.03.2016, 15.03.2016, 31.05.2016, 16.09.2016, 06.10.2016, 11.01.2017, 09.03.2017, 13.03.2017 ಮತ್ತು 22.03.2017, 22.03.2017, 23.06.2017, 28.09.2017, 16.01.2018, 06.03.2018, 09.05.2018,
3. ದಿನಾಂಕ: ಸರ್ಕಾರಿ ಆದೇಶ ಸಂಖ್ಯೆ: ಮೂಅಇ 45 ರಾರಾಹೆ 2018, ದಿನಾಂಕ: 23.02.2018, 18.06.2018, 05.03.2019, 28.08.2019, 28.08.2019, 01.01.2020, 04.02.2020, 04.02.2020, 14.02.2020, 27.03.2020, 15.12.2020, 05.02.2021, 13.07.2021, 12.08.2021,
4. ವಿಶೇಷ ಜಿಲ್ಲಾಧಿಕಾರಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ ಇವರ ಪತ್ರ ಸಂಖ್ಯೆ: ಕಕೈಪ್ರಮಂ/ಕೇಂ.ಕ.ಭೂಸ್ವಾ/2500-9/4812/2021-22, ದಿನಾಂಕ:09.07. 2021.

******

**<u>ಪ್ರಸ್ತಾವನೆ:</u>**

1. ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರಿ ಆದೇಶದಲ್ಲಿ ಗದಗ – ವಾಡಿ ಹೊಸ ರೈಲು ಮಾರ್ಗ ಯೋಜನೆಯನ್ನು ರೂ. 1922.14 ಕೋಟಿಗಳ ಅಂದಾಜು ವೆಚ್ಚ ಮತ್ತು ಮುಂದೆ ಆಗಬಹುದಾದ ವೆಚ್ಚ ಹೆಚ್ಚಳವನ್ನು ಶೇ.50:50 ವೆಚ್ಚ ಹಂಚಿಕೆ ಆಧಾರದಡಿ ರೈಲ್ವೆ ಮಂತ್ರಾಲಯ ಹಾಗೂ ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಲು ಹಾಗೂ ಯೋಜನೆಗೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡಲು ಆಡಳತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

2) ಮೇಲೆ ಓದಲಾದ ಕ್ರ.ಸಂ. (2 & 3) ರ ಸರ್ಕಾರಿ ಆದೇಶಗಳಲ್ಲಿ ಗದಗ – ವಾಡಿ ಹೊಸ ರೈಲು ಮಾರ್ಗ ಯೋಜನೆಗೆ ಭೂಸ್ವಾಧೀನಪಡಿಸುವ ಸಂಬಂಧ ಒಟ್ಟು ಮೊತ್ತ ರೂ 299,66,52,472/- ಗಳನ್ನು ಕೆಐಎಡಿಬಿ ಬೆಂಗಳೂರು ಹಾಗೂ ಕಾಮಗಾರಿಯ ವೆಚ್ಚಕ್ಕಾಗಿ ರೂ.149,88,30,000/-ಗಳನ್ನು ನೈರುತ್ಯ ರೈಲ್ವೆ ಇವರಿಗೆ ಹಂತ ಹಂತವಾಗಿ ಬಿಡುಗಡೆ ಮಾಡಲಾಗಿದೆ.

4) ಮೇಲೆ ಓದಲಾದ ಕ್ರ.ಸಂ. (4)ರ ಪತ್ರದಲ್ಲಿ ವಿಶೇಷ ಜಿಲ್ಲಾಧಿಕಾರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ ಇವರು ಗದಗ-ವಾಡಿ ಹೊಸ ರೈಲು ಯೋಜನೆಗೆ ಸಂಬಂಧಿಸಿದಂತೆ, ಅಂತಿಮ ಅಧಿಸೂಚನೆ ಹೊರಡಿಸಲಾಗಿರುವ ಜಮೀನಿನ ಪೈಕಿ ಪರಿಹಾರ ಪಾವತಿಸಲು ಬಾಕಿ ಇರುವ ಒಟ್ಟು 956.36 ಎಕರೆ ಹಾಗೂ ಪರಿಹಾರ ಧರ ನಿಗಧಿಪಡಿಸಲು ಬಾಕಿ ಇರುವ ಒಟ್ಟು 1101.15 ಎಕರೆ ಜಮೀನಿಗೆ ತುರ್ತಾಗಿ ಪರಿಹಾರ ಪಾವತಿಸಲು ಅಂದಾಜು ರೂ.150.00 ಕೋಟಿ ಅನುದಾನದ ಅವಶ್ಯಕತೆ ಇದೆ ಎಂದು ಕೋರಿರುತ್ತಾರೆ.

5) ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ ಮೂಅಇ 08 ರಾರಾಹೆ 2021</u>**
**<u>ಬೆಂಗಳೂರು, ದಿನಾಂಕ:26.11.2021.</u>**

1) ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಗದಗ – ವಾಡಿ ರೈಲ್ವೆ ಮಾರ್ಗದ ಯೋಜನೆಯ ಭೂಸ್ವಾಧೀನಕ್ಕಾಗಿ ಪರಿಹಾರ ಪಾವತಿಸಲು ರೂ.8,31,79,809/- ಕೋಟಿಗಳನ್ನು (ರೂಪಾಯಿ ಎಂಟು ಕೋಟಿ ಮೂವತ್ತೊಂದು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಎಂಟುನೂರ ಒಂಬತ್ತು ಮಾತ್ರ) ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2) ಸದರಿ ಆದೇಶವನ್ನು ಈಗಾಗಲೇ ಗದಗ-ವಾಡಿ ಹೊಸ ರೈಲು ಮಾರ್ಗ ಯೋಜನೆಗೆ ಸಂಬಂಧಿಸಿದಂತೆ ಇದುವರೆವಿಗೂ ಭೂಸ್ವಾಧೀನಕ್ಕಾಗಿ ಬಿಡುಗಡೆಯಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಒದಗಿಸುವ ಷರತ್ತಿಗೊಳಪಟ್ಟು ಆದೇಶಿಸಲಾಗಿದೆ.

3) ಈ ಮೊತ್ತವನ್ನು 2021-22ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ **"5465-01-190-3-05-132- ಹೊಸ ಯೋಜನೆಗಳ ವೆಚ್ಚ ಹಂಚಿಕೆ -ಬಂಡವಾಳ ವೆಚ್ಚಗಳ** ರಡಿಯಲ್ಲಿ ಲಭ್ಯವಿರುವ ಅನುದಾನದಿಂದ ಭರಿಸತಕ್ಕದ್ದು.

4) ಈ ಮೊತ್ತವನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲುಸಹಿಯೊಂದಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು ಇವರು Payee's Receipt ಮುಖಾಂತರ ಡ್ರಾ ಮಾಡಲು ಅಧಿಕರಿಸಿದೆ.

5) ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2020, ದಿನಾಂಕ: 30.09.2021 ರಲ್ಲಿ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kan

**(ಎಸ್.ಎನ್.ಕಲಾವತಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್ – 1, 2, 3/ A & E), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು.
2. ಅಧ್ಯಕ್ಷರು, ರೈಲ್ವೆ ಮಂಡಳಿ, ನವದೆಹಲಿ – 110011.
3. ಮುಖ್ಯ ಆಡಳಿತಾಧಿಕಾರಿ, (ನಿರ್ಮಾಣ) ನೈರುತ್ಯ ರೈಲ್ವೆ, ನಂ.18, ಮಿಲ್ಲರ್ಸ್ ರಸ್ತೆ, ಬೆಂಗಳೂರು.
4. ವಿಭಾಗಾಧಿಕಾರಿಗಳು, ಬೆಳಗಾಂ ವಿಭಾಗ, ಬೆಳಗಾಂ.
5. ಮುಖ್ಯ ಅಭಿಯಂತರರು (ನಿರ್ಮಾಣ), ನೈರುತ್ಯ ರೈಲ್ವೆ, ಕೇಶವಾಪುರ, ಹುಬ್ಬಳ್ಳಿ.
6. ಆರ್ಥಿಕ ಸಲಹೆಗಾರರು ಹಾಗೂ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ಬೆಂಗಳೂರು.
7. ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ/ ಕಲಬುರಗಿ ಜಿಲ್ಲೆ.
8. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕೆಐಎಡಿಬಿ, ಬೆಂಗಳೂರು.
9. ಖಜಾನೆ ನಿರ್ದೇಶಕರು, ವಿ.ವಿ ಗೋಪುರ, ಬೆಂಗಳೂರು.
10. ಉಪ ನಿರ್ದೇಶಕರು, ಟಿ. ಎನ್. ಎಂ. ಸಿ., ಖನಿಜ ಭವನ, ಬೆಂಗಳೂರು.
11. ಮುಖ್ಯ ಅಭಿಯಂತರರು, ಸಂ.ಮತ್ತು ಕ. (ದ), ಲೋಕೋಪಯೋಗಿ ಇಲಾಖೆ, ಕೆ. ಆರ್. ವೃತ್ತ, ಬೆಂಗಳೂರು.
12. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಕೈ.ಅ) ವಿಕಾಸ ಸೌಧ, ಬೆಂಗಳೂರು.
14. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
15. ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ/ಉಪ ಕಾರ್ಯದರ್ಶಿ-2, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ, ಸಮನ್ವಯ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
17. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.